(ಸಾಕ್ಷಿಯನ್ನು ಈ ದಿನ ಪುನಃ ದಿನಾಂಕ.**19.07.2024** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀಸವಾಲು ಃ **1** ನೆ ಪ್ರತಿವಾದಿ ಪರ ಶ್ರೀ ಎಸ್ ಜಿ ವೈ ವಕೀಲರಿಂದಃ

**1** ನೆ ಪ್ರತಿವಾದಿ ತಂದೆ ಹೆಸರು ಮೋನಪ್ಪ ತಾಯಿ ಹೆಸರು ಕೃಷ್ಣಾಬಾಯಿ. ಸದರಿಯವರಿಗೆ ಚಂದ್ರಕಾಂತ ಅಲಿಯಾಸ್ ಚಂದ್ರಹಾಸ, ಸೋಮರಾಯ ಮತ್ತು ಈರಣ್ಣ ಈ ರೀತಿ **3** ಗಂಡು ಮಕ್ಕಳು, ಲಕ್ಷ್ಮೀಬಾಯಿ, ಮಹಾನಂದ ಇನ್ನೊಬ್ಬ ಮಗಳು ಈ ರೀತಿ **3** ಹೆಣ್ಣು ಮಕ್ಕಳು ಒಟ್ಟು **6** ಮಕ್ಕಳು ಇದ್ದರು. ಮೋನಪ್ಪ ಮತ್ತು ಕೃಷ್ಣಾಬಾಯಿ ದಂಪತಿಗಳಿಗೆ ಚಂದ್ರಹಾಸ, ಸೋಮಣ್ಣ, ಈರಣ್ಣ ಈ ರೀತಿ **3** ಗಂಡು ಮಕ್ಕಳು, ಮಲ್ಲಮ್ಮ, ಮೋನಮ್ಮ ಮತ್ತು ಲಕ್ಷ್ಮೀಬಾಯಿ ಈ ರೀತಿ **3** ಹೆಣ್ಣು ಒಟ್ಟು **6** ಮಕ್ಕಳು ಇದ್ದರು ಎಂದರೆ ಸರಿ. ಚಂದ್ರಕಾಂತನ ಹೆಂಡತಿ ಮೋನಮ್ಮ ಎಂದರೆ ಸರಿಯಲ್ಲ. ಚಂದ್ರಕಾಂತನ ಮಕ್ಕಳು ಬಗವಂತ್ರಾಯ, ಈರಣ್ಣ ಮತ್ತು ಸಾವಿತ್ರಿ ಎಂದರೆ ಸರಿಯಲ್ಲ. **1** ಮತ್ತು **2** ನೆ ಪ್ರತಿವಾದಿಯರ ಮದುವೆ ಕಲಬುರ್ಗಿಯ ರಾಮಮಂದಿರದಲ್ಲಿ ದಿ.**10.04.2013** ರಲ್ಲಿ ಆಗಿದೆ ಎಂದರೆ ಸರಿಯಲ್ಲ. **1** ನೆ ಪ್ರತಿವಾದಿಗೆ **2** ನೆ ಪ್ರತಿವಾದಿ ಮೊದಲನೆ ಹೆಂಡತಿ ಎಂದರೆ ಸರಿಯಲ್ಲ. ದಾವಾ ಸ್ವತ್ತು ಸರ್ವೆ ನಂಬರ **142/1** ಕ್ಷೇತ್ರ **3** ಎಕರೆ **28** ಗುಂಟೆ ಜಮೀನು **2** ನೆ ಪ್ರತಿವಾದಿಗೆ **1** ನೆ ಪ್ರತಿವಾದಿ ದಿ.**28.1.2020** ರಂದು ನೊಂದಾಯಿತ ಬಕ್ಷಿಸ್ ಪತ್ರದ ಮೂಲಕ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದೆ ಎಂದರೆ ಸರಿಯಲ್ಲ. ಸರ್ವೆ ನಂಬರ **86/1** ಬಗಲೂರು ಗ್ರಾಮದ ಜಮೀನು **5** ವರೆ ಎಕರೆ ಇರುತ್ತದೆ. ಸದರಿ ಜಮೀನಿನ ಮಣ್ಣಿನ ವಿಧ ನನಗೆ ಹೇಳಲಾಗುವುದಿಲ್ಲ. ಗತ್ತರಗಿ ಗ್ರಾಮದ ಸರ್ವೆ ನಂಬರ **186/1** ಕ್ಷೇತ್ರ **2** ಎಕರೆ **7** ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನ ಮಣ್ಣಿನ ವಿಧ ನನಗೆ ಹೇಳಲಾಗುವುದಿಲ್ಲ.

ದಾವಾ ಸ್ವತ್ತುಗಳಲ್ಲಿ ಹತ್ತಿ, ಕಬ್ಬು ಬೆಳೆಯಲಾಗುತ್ತದೆ. ಸರ್ವೆ ನಂಬರ **86/1** ಬಗಲೂರು ಗ್ರಾಮದ ಜಮೀನು **5** ವರೆ ಎಕರೆ ಜಮೀನಲ್ಲಿ **2021-22** ನೇ ಸಾಲಿನಲ್ಲಿ ಗೋದಿ ಮತ್ತು ಕಬ್ಬು ಬೆಳೆದಿರುತ್ತಾರೆ. **142/2** ರಲ್ಲಿ ಏನು ಬೆಳೆಯುತ್ತಾರೆ ಎಂದು

ನನಗೆ ಗೊತ್ತಿಲ್ಲ. ಗತ್ತರಗಿ ಗ್ರಾಮದ ಸರ್ವೆ ನಂಬರ **186/1** ರಲ್ಲಿ ಗೋದಿ ಮತ್ತು ಕಬ್ಬು ಬೆಳೆಯಲಾಗುತ್ತದೆ. ನಾನು ಯಾವುದೆ ಸಮಯದಲ್ಲಿ ದಾವಾ ಸ್ವತ್ತಿನಲ್ಲಿ ನಾನು ಹೋಗಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಬರ **86/1** ರ ಚಕಬಂದಿ ನನಗೆ ಹೇಳಲಾಗುವುದಿಲ್ಲ. ಸರ್ವೆ ನಂಬರ **142/2** ರ ಚಕಬಂದಿ ನನಗೆ ಹೇಳಲಾಗುವುದಿಲ್ಲ. ಸರ್ವೆ ನಂಬರ **186/1** ರ ಚಕಬಂದಿ ನನಗೆ ಹೇಳಲಾಗುವುದಿಲ್ಲ. ಸುಳ್ಳು ವಂಶಾವಳಿ ಸಲ್ಲಿಸಿ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ**26** ಸುಳ್ಳು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ**27** ರಲ್ಲಿ ನನ್ನ ತಾಯಿಯ ಅಡ್ಡ ಹೆಸರು ಯಾಕೆ ಇಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ನಾವು ಊರಿಗೆ ದುಡಿಯಲು ಹೋಗಿದ್ದ ಎಂದು ನುಡಿಯುತ್ತಾರೆ. ಸಂಬಂದಪಟ್ಟ ಅಧಿಕಾರಿಯವರಿಗೆ ನಾವು ಮಾಹಿತಿ ನೀಡಿದರೂ ಅವರು ಹಾಕಿರುವುದಿಲ್ಲ. ಸದರಿ ಅಧಿಕಾರಿಗಳಿಗೆ ನಾವು ಸಾಕ್ಷಿ ಮಾಡಿಸುವುದಿಲ್ಲ. ನಿಪಿ**28** ಸುಳ್ಳು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಸರ್ವೆ ನಂಬರ **142/2** ಕ್ಷೇತ್ರ **3** ಎಕರೆ **28** ಗುಂಟೆ ಜಮೀನಿಗೆ **2** ನೆ ಪ್ರತಿವಾದಿ ಮಾತ್ರ ಮಾಲೀಕಳಿರುತ್ತಾಳೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಕೇವಲ **1** ರಿಂದ **5** ನೆ ಪ್ರತಿವಾದಿಯರು ಮಾತ್ರ ಮಾಲೀಕರು ಮತ್ತು ಸಾಗುವಳಿದಾರರು ಇರುತ್ತಾರೆ ಎಂದರೆ ಸರಿಯಲ್ಲ. **1** ನೆ ಪ್ರತಿವಾದಿಯ ಆಸ್ತಿಯನ್ನು ಕಾನೂನು ಬಾಹಿರವಾಗಿ ಪಡೆಯಲು ನಾನು ಮತ್ತು **1** ನೆ ವಾದಿ ಸೇರಿ ಸುಳ್ಳು ದಾವೆ ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. **1** ನೆ ವಾದಿ ಮತ್ತು **1** ನೆ ಪ್ರತಿವಾದಿಯ ಮದುವೆ ಆಮಂತ್ರಣ ಪತ್ರಿಕೆ ನಾನು ಹಾಜರುಪಡಿಸಿಲ್ಲ. ದಾವಾ ಸ್ವತ್ತು ಕಾನೂನು ಬಾಹಿರವಾಗಿ ಪಡೆಯಲು ಸುಳ್ಳು ದಾವಾ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.